ರೋಗ್ಯ
ಬುಧವಾರ
12.5.2010

## ಮಂಗಳೂರಲ್ಲಿ ಮೈಕ್ರೋಸರ್ಜರಿ

# ಹೊಸ ಕೈ



ಮಂಗಳೂರು ಯೇನೆಪೋಯ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಇತ್ತೀಚೆಗೆ ಎರಡು ವಿಶಿಷ್ಟ ಹಸ್ತದ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಸಾಮಾನ್ಯ ಶಸ್ತ್ರಚಿಕಿತ್ಸೆ ನಡೆದಿದ್ದರೆ ಎರಡೂ ಸಂದರ್ಭಗಳಲ್ಲಿ ಕೈಗಳ ತೀವ್ರ ವಿಕಲತೆ ಉಂಟಾಗುತ್ತಿತ್ತು ಎನ್ನುತ್ತಾರೆ ಶಸ್ತ್ರಚಿಕಿತ್ಸೆ ನಡೆಸಿದ ಪ್ಲಾಸ್ಟಿಕ್ ಮತ್ತು ಮೈಕ್ರೋ ವ್ಯಾಸ್ಕುಲರ್ ಸರ್ಜನ್ ಡಾ| ಸತೀಶ್‌ಭಟ್.(9448869425)

**ಪ್ರಕರಣ–1:**

ಬೈಕ್ ಅಪಘಾತದಲ್ಲಿ ಮಂಗಳೂರು ಮಣ್ಣಗುಡ್ಡೆ ಮುರಳೀಧರ ಕಾಮತ್ ಎಂಬುವರ ಬಲಗೈ ಮಣಿಗಂಟಿನ ಮೇಲಿನ ಭಾಗ ತುಂಡಾಗಿತ್ತು. ಅವರು ತುಂಡಾದ ಕೈಯನ್ನು ಚೀಲದಲ್ಲಿ ಇರಿಸಿಕೊಂಡು ಎಸ್‌ಸಿಎಸ್ ಆಸ್ಪತ್ರೆಗೆ ಬಂದರು. ಅಲ್ಲಿ ಡಾ| ಸತೀಶ್ ಭಟ್ ಮತ್ತು ಎಲುಬು ತಜ್ಞ ಡಾ| ಜಗನ್ನಾಥ ಕಾಮತ್ ಸೇರಿ ತುಂಡಾದ ಕೈಯನ್ನು ಏಳು ತಾಸು ಕಾಲ ನಡೆದ ಮೈಕ್ರೋ ಸರ್ಜರಿ ಸಹಾಯದಿಂದ ಜೋಡಿಸಿದರು. ಇನ್ನು ಸಾಧಾರಣ ಮೂರು ತಿಂಗಳ ಫಿಸಿಯೋಥೆರಪಿ ಚಿಕಿತ್ಸೆ ಮಾಡುವುದರಿಂದ ಅವರ ಕೈ ಹಿಂದಿನ ಕೆಲಸ ಮಾಡಲು ಸಾಧ್ಯವಿದೆ.

**ಪ್ರಕರಣ –2:**

ಕಾಸರಗೋಡು ಜಿಲ್ಲೆ ಬದಿಯಡ್ಕದ ಮಹಮ್ಮದ್ ಎಂಬುವರಿಗೆ ಬಲಗೈ ತೋರುಬೆರಳು ಎಲುಬಿನಲ್ಲಿ ಉಂಟಾದ ಕ್ಯಾನ್ಸರ್‌ನಿಂದ ಕೆಲಸ ಮಾಡಲು ಕಷ್ಟವಾಗುತ್ತಿತ್ತು. ಮಂಗಳೂರು ಯೇನೆಪೋಯ ಆಸ್ಪತ್ರೆ ಡಾ| ಪಿ.ಸತೀಶ್ ಭಟ್ ನಡೆಸಿದ ಶಸ್ತ್ರಚಿಕಿತ್ಸೆಯಲ್ಲಿ ಬೆರಳ ಕ್ಯಾನ್ಸರನ್ನು ತೆಗೆದು ಹೊಸ ಬೆರಳು ಸೃಷ್ಟಿಸಲಾಯಿತು. ಸಾಮಾನ್ಯವಾಗಿ ಇಂಥ ಸಂದರ್ಭದಲ್ಲಿ ಸಂಪೂರ್ಣ ಬೆರಳು ಕತ್ತರಿಸಲಾಗುತ್ತದೆ. ಆದರೆ, ಮಹಮ್ಮದ್‌ಗೆ ಮಾಡಿದ ಶಸ್ತ್ರಚಿಕಿತ್ಸೆಯಲ್ಲಿ ಬಲಕಾಲಿನ ಎರಡನೇ ಬೆರಳಿನ ಎಲುಬು ನರಗಳ ಸಹಿತ ಅತಿಸೂಕ್ಷ್ಮವಾಗಿ ತೆಗೆದು ಬಲಗೈ ತೋರು ಬೆರಳಿಗೆ ಮೈಕ್ರೋ ವ್ಯಾಸ್ಕುಲರ್ ಸರ್ಜರಿ ಮೂಲಕ ಜೋಡಿಸಿ ಎಲುಬಿಗೆ ರಕ್ತ ಪೂರೈಸಿ ಜೀವ ಬರುವಂತೆ ಮಾಡಲಾಯಿತು.

ಸಾಮಾನ್ಯ ಎಲುಬು ಕಸಿ ಶಸ್ತ್ರಚಿಕಿತ್ಸೆ ಮಾಡಿದರೆ ಕೆಲ ಸಮಯದ ನಂತರ ಜೋಡಿಸಿದ ಎಲುಬು ಕರಗಿಹೋಗುವ ಸಾಧ್ಯತೆ ಇದೆ. ಆದರೆ, ರಕ್ತಚಲನೆ ಇದ್ದ ನರಗಳ ಸಹಿತ, ಮೈಕ್ರೋ ಸರ್ಜರಿ ಮೂಲಕ ಮಾಡಿದ ಎಲುಬು ಕಸಿ ಶಾಶ್ವತವಾಗಿ ಉಳಿಯುವುದು. ಮಹಮದ್ ಗಾಯ ವಾಸಿಯಾದ ನಂತರ ತೆಗೆದ ಎಕ್ಸರೇಯಲ್ಲಿ ಬಲಗೈ ಬೆರಳಿನ ರಚನೆ ಅವರ ಎಡಗೈ ಬೆರಳಿನ ರಚನೆಯಷ್ಟೇ ಉತ್ತಮವಾಗಿತ್ತು. ಮಹಮ್ಮದ್ ತಮ್ಮ ಕೈಯನ್ನು ನಿತ್ಯ ಕೆಲಸಗಳಿಗೆ ಉಪಯೋಗಿಸಲು ಪ್ರಾರಂಭಿಸಿದ್ದಾರೆ ಎಂದು ತಿಳಿಸುತ್ತಾರೆ ಡಾ| ಸತೀಶ್ ಭಟ್.

**17ರಿಂದ ಕೈ ಶಸ್ತ್ರಚಿಕಿತ್ಸೆ ಶಿಬಿರ:**

ಇದೇ ರೀತಿ ಉಪಯೋಗವನ್ನು ಜನರಿಗೆ ಕೊಡುವ ಉದ್ದೇಶದಿಂದ ಮಂಗಳೂರು ಸೆಂಟ್ರಲ್ ರೋಟರಿ ಸಹಯೋಗದೊಂದಿಗೆ ಮಂಗಳೂರು ಯೇನೆಪೋಯ ಸ್ಪೆಷಾಲಿಟಿ ಆಸ್ಪತ್ರೆ ಉಚಿತ ಕೈ ಶಸ್ತ್ರಚಿಕಿತ್ಸೆ ನಡೆಸಲು ಉದ್ದೇಶಿಸಿದೆ. ರೋಗಿಗಳಿಗೆ ಸಣ್ಣಪುಟ್ಟ ಪರೀಕ್ಷೆಗಳನ್ನು ಉಚಿತವಾಗಿ ಹಾಗೂ ಸ್ಕ್ಯಾನ್ ಪರೀಕ್ಷೆ ಮತ್ತು ಚಿಕಿತ್ಸೆಯನ್ನು ರಿಯಾಯಿತಿ ದರದಲ್ಲಿ ಮೇ 17ರಿಂದ ಜೂ.11ರ ತನಕ ಅಪರಾಹ್ನ 3ರೊಳಗೆ ನಡೆಯುವ ಶಿಬಿರದಲ್ಲಿ ನಡೆಸಿಕೊಡಲಾಗುವುದು ಎಂದು ಡಾ| ಸತೀಶ್ ಭಟ್ ಮಾಹಿತಿ ನೀಡಿದ್ದಾರೆ. ●